ಸಾಂಕೇತಿಕವಾಗಿ ಇರಿಸಿದ ಹೆಸರುಗಳು. ನವಗಿರಿನಂದರ ಮಕ್ಕಳ ಕಥೆಗಳ ವಾಕ್ಯರಚನೆಯ ಶೈಲಿ ಅವರ ಗಂಭೀರ ಕೃತಿಗಳಲ್ಲಿಯೂ ಕಾಣಿಸುತ್ತದೆ. ಉದಾಹರಣೆ: "ಆ ಮನೆಗೆ 'ಹೆಗ್ಗಡೆ ಕೊಟ್ಟರ್ರ ಮನೆ' ಎಂದು ಹೆಸರುಂಟು. ಸಮರಾಂಗಿನಿ ಎಂಬವಳು ಅಲ್ಲಿಯ ಯಜಮಾನಿನಿ. ಯಜಮಾನ ಇರಲಿಲ್ಲ. 'ಹೆಗ್ಗಡೆ' ಎಂಬೊಬ್ಬ ಯಜಮಾನರು ಆಕೆಗೆ ಕೊಟ್ಟ ಮನೆ ಅದು. ಮನೆ ಮಾತ್ರವಲ್ಲ, ಸಣ್ಣ ತೋಟ, ತೋಟದಲ್ಲಿ ಕೆಲವು ತೆಂಗಿನಮರಗಳು, ಮಾವು, ಹಲಸು ಮರಗಳು, ಬಾವಿ ಮೊದಲಾದವು ಬೇಕಾದುದು ಇದ್ದುವು. ಸಮರಾಂಗಿನಿಗೆ 'ಚೆನ್ನಂಗಿ' 'ಸಣ್ಣಂಗಿ' ಎಂಬ ಇಬ್ಬರು ಅಕ್ಕತಂಗಿಯರು ಮಾತ್ರವೇ ಮಕ್ಕಳು" (ಪುಟ 41).

ಈ ಕಾದಂಬರಿಯ ಹೆಚ್ಚಿನ ಹೆಸರುಗಳು ಸಾಂಕೇತಿಕವಾಗಿವೆ. ಪ್ರೇಮಾವತಿ ಪ್ರೇಮಕ್ಕೆ ಬಲಿಯಾದವಳು. ದಾಮೋದರ, ಕೇಶವ, ಕೃಷ್ಣ, ಮಾಧವ ಎಲ್ಲವೂ ಶ್ರೀಕೃಷ್ಣನ ವಿವಿಧ ವ್ಯಕ್ತಿತ್ವಗಳನ್ನು ಸೂಚಿಸುವ ಹೆಸರುಗಳು. ಹೆಂಗಸರನ್ನು ಬಲೆಗೆ ಹಾಕಿಕೊಳ್ಳುವುದರಲ್ಲಿ ನಿಸ್ಸೀಮನೂ, ನಿರ್ಲಜ್ಜನೂ ಆಗಿರುವ ಕಿಟ್ಟಪ್ಪ ಮಾಸ್ತರರ ಹೆಸರು ಕೃಷ್ಣನ ಮತ್ತೊಂದು ಹೆಸರು. ಸುಂದರೇಶ ರೂಪದಲ್ಲಷ್ಟೇ ಸುಂದರ. ಪ್ರಮೀಳೆ ಸ್ವತಂತ್ರವಾಗಿ ಬದುಕಬಲ್ಲ ಧೈರ್ಯವೂ ಸ್ಥೈರ್ಯವೂ ಇರುವ ಹೆಣ್ಣುಮಗಳು. ಟಾಲ್‌ಸ್ಟಾಯ್ ತನ್ನ ಪಾತ್ರಗಳಿಗೆ ಈ ರೀತಿಯ ಸಾಂಕೇತಿಕ ಹೆಸರುಗಳನ್ನು ಇಡುತ್ತಿದ್ದ ಎನ್ನುವುದನ್ನಿಲ್ಲಿ ನೆನೆಯಬಹುದು. ಒಟ್ಟಿನಲ್ಲಿ 'ಪ್ರೇಮಾವತಿ' ಕನ್ನಡದ ಉತ್ತಮ ಕಾದಂಬರಿಗಳಲ್ಲಿ ಒಂದೆಂದು ಗುರುತಿಸಬಹುದಾದ ಕಾದಂಬರಿಯಾಗಿದೆ.

ನವಗಿರಿನಂದ: ಕನ್ನಡದಲ್ಲಿ ನಲುವತ್ತು ಕಾದಂಬರಿಗಳನ್ನೂ, ಸುಮಾರು ಏಳು ನೂರರಷ್ಟು ಮಕ್ಕಳ ಕಥೆಗಳನ್ನೂ, ನೂರಕ್ಕಿಂತ ಹೆಚ್ಚು ಸಣ್ಣ ಕತೆಗಳನ್ನೂ ಬರೆದ ಹೊಸಬೆಟ್ಟು ರಂಗರಾವ್ ಅಥವಾ ನವಗಿರಿನಂದ (1913-1996) ಮಂಗಳೂರಿನ ಬಳಿಯಿರುವ ಸುರತ್ಕಲ್ ಹೊಸಬೆಟ್ಟಿನವರು. (ಹೊಸ = ನವ; ಬೆಟ್ಟು = ಗಿರಿ). ಅವರು ಪ್ರಾಥಮಿಕ ಶಾಲೆಯ ಶಿಕ್ಷಣ ಪಡೆದ ಬಳಿಕ ಬಡತನದಿಂದಾಗಿ ಉದ್ಯೋಗ ಅರಸಿಕೊಂಡು ಮದ್ರಾಸಿಗೆ ಹೋದರು. ಅಲ್ಲಿ ಶ್ರೀಮಂತರೊಬ್ಬರ ಮನೆಯಲ್ಲಿ ಅಡುಗೆ ಕೆಲಸಕ್ಕೆ ಸೇರಿದ ಅವರು ಮೊದಲಿನಿಂದಲೂ ಕಥೆಗಳನ್ನು ಬರೆಯುತ್ತಲೇ ಇದ್ದರು. 'ಚಂದಮಾಮ' ಪತ್ರಿಕೆಯ ಕನ್ನಡ ಆವೃತ್ತಿಯ ಸಂಪಾದಕರಾದ ಎಂ. ಟಿ. ವಿ. ಆಚಾರ್ಯರು ಅವರನ್ನು 1952 ರಲ್ಲಿ ಚಂದಮಾಮದ ಸಂಪಾದಕ ಬಳಗಕ್ಕೆ ಸೇರಿಸಿಕೊಂಡ ಮೇಲೆ ನವಗಿರಿನಂದರಿಗೆ ತಮ್ಮ ಇಷ್ಟದ ಸಾಹಿತ್ಯವೇ ವೃತ್ತಿಯಾಯಿತು. ಮುಂದೆ ಅವರು 'ಚಂದಮಾಮ'ದ ಕನ್ನಡ ವಿಭಾಗದ ಮುಖ್ಯಸ್ಥರಾದರು. ಅವರು ಎಂ. ಟಿ. ವಿ. ಆಚಾರ್ಯರಂತೆ ಚಿತ್ರಗಳನ್ನು ಕೂಡ ಬರೆಯುತ್ತಿದ್ದರು. ಅವರು ಒಳ್ಳೆಯ ವರ್ಣಚಿತ್ರ ಕಲಾವಿದರಾಗಿದ್ದರು.

ನವಗಿರಿನಂದರು 'ಚಂದಮಾಮ' ಪತ್ರಿಕೆಗಾಗಿ ನಿರಂತರವಾಗಿ ಮಕ್ಕಳ ಕಥೆಗಳನ್ನು ಬರೆಯುತ್ತಿದ್ದರು. ಜತೆಗೆ ಕತೆ, ಕಾದಂಬರಿಗಳನ್ನು ಬರೆಯುತ್ತಿದ್ದರು. ಅವರ ಸಣ್ಣಕತೆಗಳು 'ಸುಧಾ', 'ವೀರಭೂಮಿ' ಮುಂತಾದ ಕನ್ನಡ ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಅವರ ಕಾದಂಬರಿಗಳು ಕೂಡಾ ಜನಪ್ರಿಯವಾಗಿ ಕರ್ನಾಟಕದ ಪ್ರಕಾಶಕರಿಂದ ಪ್ರಕಟವಾಗುತ್ತಿದ್ದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ - ಪ್ರೇಮಾವತಿ, ನತದೃಷ್ಟೆ (ಕನ್ನಡ ಸಾಹಿತ್ಯ ಪರಿಷತ್ತು ಮರುಮುದ್ರಿಸಿದೆ), ಗೆದ್ದ ಹೆಣ್ಣು, ಖಾಕೀ ಕೊಲೆಗಾರ, ಪತಿ, ಮೊದ್ದು ಮಗು, ವಿಷಮ ವೃತ್ತ, ರಾಣೀ ಅಜ್ಞಾತಾ (ವಿಜಯನಗರದ ಇತಿಹಾಸದಿಂದ ತೆಗೆದ ಒಂದು ಸ್ವರ್ಣಪುಟ), ಪ್ರಸಾದ, ಹಂತಕನು ಯಾರು, ಕಾಲಾ ಬಜಾರ್, ಖಾಕೀ ಕೊಲೆಗಾರ, ಮಹೇಂದ್ರಜಾಲ ಇತ್ಯಾದಿ. ಇವುಗಳಲ್ಲಿ ಕೆಲವು ಪತ್ತೇದಾರಿ ಕಾದಂಬರಿಗಳು. ನವಗಿರಿನಂದ ತೆಲುಗಿನಲ್ಲಿಯೂ ಕಾದಂಬರಿಗಳನ್ನು ಬರೆದು ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟಿಸುತ್ತಿದ್ದರು. ಅವರ ಎಲ್ಲ ಕೃತಿಗಳೂ ಈಗ ಲಭ್ಯವಿಲ್ಲ. ●